ತಾಃ- 09.03.2020 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆ ಸಾರ್ವಜನಿಕ ಅಭಿಯೋಜಕರಿಂದಃ**

ನಿ.ಪಿ-24 ಹಾಗೂ ನಿಪಿ-32 ರ ಮೂಲ ದಾಖಲಾತಿಗಳನ್ನು ಈಗ ನೋಡುತ್ತಿದ್ದು ಅವುಗಳಲ್ಲಿ ನನ್ನ ಸಹಿಗಳಿವೆ. ಸದರಿ ಮೂಲ ದಾಖಲೆಗಳನ್ನು ಈ ಪ್ರಕರಣದಲ್ಲಿ ಅನುಕ್ರಮವಾಗಿ ನಿ.ಪಿ-33 ಮತ್ತು 34 ಎಂದು ಗುರುತಿಸಲಾಯಿತು. ನಿಪಿ-33 ಮತ್ತು 34 ರಲ್ಲಿನ ಸಾಕ್ಷಿಯ ಸಹಿಗಳನ್ನು ನಿಪಿ-33(ಎ) ಹಾಗೂ 34(ಎ) ಎಂದು ಗುರುತಿಸಲಾಯಿತು.

ನಿಪಿ-22ರ ಮೂಲ ದಾಖಲಾತಿಯನ್ನು ನೋಡುತ್ತಿದ್ದು ಅದರಲ್ಲಿ ನನ್ನ ಸಹಿ ಇದೆ. ಸದರಿ ದಾಖಲೆಯನ್ನು ನಿಪಿ-35 ಎಂದು ಗುರುತಿಸಲಾಯಿತು. ನಿಪಿ-35 ರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-35(ಎ) ಎಂದು ಗುರುತಿಸಲಾಯಿತು. ನಿಪಿ-35 ರ ಅಡಿ ಅಮಾನತ್ತುಪಡಿಸಿಕೊಂಡ ಮಾಲುಗಳನ್ನು ಮಾಲು ಪಟ್ಟಿ ಸಂಖ್ಯೆ 30/14 ಕ್ಕೆ ನಮೂದಿಸಿ ನ್ಯಾಯಾಲಯಕ್ಕೆ ಸಲ್ಲಿಸಿದ್ದೆನು. ಈಗ ನನಗೆ ತೋರಿಸುತ್ತಿರುವ ಸದರಿ ಮಾಲು ಪಟ್ಟಿ ಸಂಖ್ಯೆ 30/14 ನೋಡುತ್ತಿದ್ದು ಅದರಲ್ಲಿ ನನ್ನ ಸಹಿ ಇದೆ. ಸದರಿ ದಾಖಲೆಯನ್ನು ನಿಪಿ-36 ಎಂದು ಗುರುತಿಸಲಾಯಿತು. ನಿಪಿ-36 ರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-36(ಎ) ಎಂದು ಗುರುತಿಸಲಾಯಿತು.

1 ರಿಂದ 5ನೇ ಆರೋಪಿತರು ನನ್ನ ಮುಂದೆ ನೀಡಿದ ಸ್ವಇಚ್ಛಾ ಹೇಳಿಕೆಗಳನ್ನು ನೋಡಿದರೆ ಗುರುತಿಸುತ್ತೇನೆ.

ಆರೋಪಿ ಕೃಷ್ಣ ನನ್ನ ಮುಂದೆ ನೀಡಿದ ಸ್ವಇಚ್ಛಾ ಹೇಳಿಕೆಯಲ್ಲಿ "ನನ್ನನ್ನು ಕರೆದುಕೊಂಡು ಹೋದರೆ ನನ್ನ ಜೊತೆ ಇದ್ದ ಎಲ್ಲಾ ಆಸಾಮಿಗಳನ್ನು ಮತ್ತು ನಾವು ಮಾಡಿದ ಜಾಗಗಳನ್ನು ತೋರಿಸುತ್ತೇನೆ ಮತ್ತು ಚಂದ್ರ ಮತ್ತು ನವೀನ ಈಗ ನೆಲಮಂಗಲದಲ್ಲಿ ನಮಗಾಗಿ ಕಾಯುತ್ತಿದ್ದು ಕರೆದುಕೊಂಡು ಹೋದರೆ ಆಸಾಮಿಗಳನ್ನು ತೋರಿಸುತ್ತೇನೆ" ಅಂತ ಹೇಳಿರುತ್ತಾನೆ. ಅರೋಪಿತನ ಮೂಲ ಸ್ವಇಚ್ಛಾ ಹೇಳಿಕೆಯಲ್ಲಿನ ಸದರಿ ಭಾಗವನ್ನು ನಿಪಿ-37 ಎಂದು ಗುರುತಿಸಲಾಯಿತು.

ಆರೋಪಿ ರಾಜೇಶ ನನ್ನ ಮುಂದೆ ನೀಡಿದ ಸ್ವಇಚ್ಛಾ ಹೇಳಿಕೆಯಲ್ಲಿ "ನನ್ನನ್ನು ಕರೆದುಕೊಂಡು ಹೋದರೆ ನನ್ನ ಜೊತೆ ಇದ್ದ ಎಲ್ಲಾ ಆಸಾಮಿಗಳನ್ನು ಮತ್ತು ನಾವು ಮಾಡಿದ ಜಾಗಗಳನ್ನು ತೋರಿಸುತ್ತೇನೆ ಮತ್ತು ಚಂದ್ರ ಮತ್ತು ನವೀನ ಈಗ ನೆಲಮಂಗಲದಲ್ಲಿ ನಮಗಾಗಿ ಕಾಯುತ್ತಿದ್ದು ಕರೆದುಕೊಂಡು ಹೋದರೆ ಆಸಾಮಿಗಳನ್ನು ತೋರಿಸುತ್ತೇನೆ" ಅಂತ ಹೇಳಿರುತ್ತಾನೆ. ಅರೋಪಿತನ ಮೂಲ ಸ್ವಇಚ್ಛಾ ಹೇಳಿಕೆಯಲ್ಲಿನ ಸದರಿ ಭಾಗವನ್ನು ನಿಪಿ-38 ಎಂದು ಗುರುತಿಸಲಾಯಿತು.

ಆರೋಪಿ ಚಂದ್ರಶೇಖರ್ ನನ್ನ ಮುಂದೆ ನೀಡಿದ ಸ್ವಇಚ್ಛಾ ಹೇಳಿಕೆಯಲ್ಲಿ "ನನ್ನನ್ನು ಕರೆದುಕೊಂಡು ಹೋದರೆ ನನ್ನ ಜೊತೆ ಇದ್ದ ಎಲ್ಲಾ ಆಸಾಮಿಗಳನ್ನು ಮತ್ತು ನಾವು ಮಾಡಿದ ಜಾಗಗಳನ್ನು ತೋರಿಸುತ್ತೇನೆ" ಅಂತ ಹೇಳಿರುತ್ತಾನೆ. ಅರೋಪಿತನ ಮೂಲ ಸ್ವಇಚ್ಛಾ ಹೇಳಿಕೆಯಲ್ಲಿನ ಸದರಿ ಭಾಗವನ್ನು ನಿಪಿ-39 ಎಂದು ಗುರುತಿಸಲಾಯಿತು.

ಆರೋಪಿ ನವೀನ ನನ್ನ ಮುಂದೆ ನೀಡಿದ ಸ್ವಇಚ್ಛಾ ಹೇಳಿಕೆಯಲ್ಲಿ "ನನ್ನನ್ನು ಕರೆದುಕೊಂಡು ಹೋದರೆ ನನ್ನ ಜೊತೆ ಇದ್ದ ಎಲ್ಲಾ ಆಸಾಮಿಗಳನ್ನು ಮತ್ತು ನಾವು ಮಾಡಿದ ಜಾಗಗಳನ್ನು ತೋರಿಸುತ್ತೇನೆ" ಅಂತ ಹೇಳಿರುತ್ತಾನೆ. ಆರೋಪಿತನ ಮೂಲ ಸ್ವಇಚ್ಛಾ ಹೇಳಿಕೆಯಲ್ಲಿನ ಸದರಿ ಭಾಗವನ್ನು ನಿಪಿ-40 ಎಂದು ಗುರುತಿಸಲಾಯಿತು.

ಆರೋಪಿ ಚಂದೂ ರಾಥೋಡ್ ನನ್ನ ಮುಂದೆ ನೀಡಿದ ಸ್ವಇಚ್ಛಾ ಹೇಳಿಕೆಯಲ್ಲಿ "ನನ್ನನ್ನು ಕರೆದುಕೊಂಡು ಹೋದರೆ ನಾನು , ರಾಜೇಶ್ ಸ್ಕೂಟರ್ ಕಳುವು ಮಾಡಿರುವ ಜಾಗವನ್ನು ಮತ್ತು ದಾಬಾಸ್‌ಪೇಟೆ ಬಳಿ ಎ ಟಿ ಎಂ ನಿಂದ ಹಣ ಕಿತ್ತುಕೊಂಡಿರುವ ಹಾಗೂ ಲಾರಿಯ ಡ್ರೈವರ್‌ನನ್ನು ಹೊಡೆದು ಹಾಕಿ ಹಣವನ್ನು ಕಿತ್ತುಕೊಂಡು ಡ್ರೈವರ್‌ಗೆ ಹೊಡೆಯಲು ಬಳಸಿದ ರಾಡ್ ಮತ್ತು ರೇಜರ್ ಚಾಕುಗಳನ್ನು ಬಿಸಾಡಿರುವ ಸ್ಥಳವನ್ನು ತೋರಿಸುತ್ತೇನೆ" ಅಂತ ಹೇಳಿರುತ್ತಾನೆ. ಆರೋಪಿತನ ಮೂಲ ಸ್ವಇಚ್ಛಾ ಹೇಳಿಕೆಯಲ್ಲಿನ ಸದರಿ ಭಾಗವನ್ನು ನಿಪಿ-41 ಎಂದು ಗುರುತಿಸಲಾಯಿತು.

(ಈ ಪ್ರಕರಣದಲ್ಲಿ ನಿಪಿ-33 ರಿಂದ ನಿಪಿ-41 ಅಂತ ನಿಶಾನೆಗೊಳಿಸಿದ ದಾಖಲೆಗಳನ್ನು ಎಸ್ ಸಿ 46/15 ರಲ್ಲಿ ನಿಪಿ-31, 32, 33, 34 , 37 ರಿಂದ 41 ಎಂದು ಗುರುತಿಸಲಾಗಿದೆ.)

ಆರೋಪಿ ರಾಜೇಶ ಮತ್ತು ಚಂದ್ರಶೇಖರ್ ಇವರನ್ನು ನೋಡಿದಲ್ಲಿ ಗುರುತಿಸುತ್ತೇನೆ. **(ಸಾಕ್ಷಿಯು ಈ ಪ್ರಕರಣದಲ್ಲಿನ ಆರೋಪಿ ರಾಜೇಶ್ ಮತ್ತು ಚಂದ್ರಶೇಖರ್ ಇವರುಗಳನ್ನು ನೋಡಿ ಗುರುತಿಸಿರುತ್ತಾರೆ).**

**ಪಾಟೀ ಸವಾಲು ಆರೋಪಿತರ ಪರ ವಕೀಲರಿಂದಃ**

(ಆರೋಪಿತರ ಪರ ವಕೀಲರು ಪಾಟೀ ಸವಾಲಿಗಾಗಿ ವೇಳೆ ಕೇಳಿದ್ದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.)

{ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ.}

ಓ ಹೇ ಸಾ ಸ ಸಹಿ ಮಾಡಿದ್ದಾರೆ.

1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.